ವಿಧವಾ ವೇತನ ಕುರಿತು

3035 - ಶ್ರೀ ಎಸ್. ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ವ್ಯಕ್ತಿಗಳಿಗೆ ವಿಧವಾ ವೇತನ, ಅಂಗವಿಕಲ ವೇತನ, ವೃದ್ಧಾಪ್ಯ ವೇತನ ಕೊಡಲ್ಪಡುತ್ತಿದೆ?

ಆ) ಎಷ್ಟು ತಿಂಗಳಿಂದ ಬಾಕಿ ಇದೆ. ಪ್ರತಿ ತಿಂಗಳು ಕ್ಲುಪ್ತ ಸಮಯಕ್ಕೆ ಕೊಡುವ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ಈ ಕೆಳಕಂಡಂತೆ ಒಟ್ಟು 13,00,068 ವ್ಯಕ್ತಿಗಳಿಗೆ ವೇತನವನ್ನು ಕೊಡಲಾಗುತ್ತಿದೆ.

1)	ವಿಧವಾ ವೇತನ	5,15,664
2)	ಅಂಗವಿಕಲ ವೇತನ	3,05,051
3)	ವೃದ್ಧಾಪ್ಯ ವೇತನ	4,79,353

ಆ) ಜುಲೈ ತಿಂಗಳಿಂದ ಬಾಕಿ ಇದೆ. ಕ್ಲುಪ್ತ ಸಮಯಕ್ಕೆ ಪಾವತಿಸುವ ವ್ಯವಸ್ಥೆ ಮಾಡಲಾಗುವುದು.

ಅಂಗನವಾಡಿ ಕಾರ್ಯಕರ್ತೆಯರಿಗೆ ವೇತನ ಹೆಚ್ಚಳ

3036 - ಶ್ರೀ ಎಸ್. ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ಮಹಿಳಾ ಮತ್ತು ಮಕ್ಕಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅಂಗನವಾಡಿ ಕಾರ್ಯಕರ್ತೆಯವರಿಗೆ ಹಾಗೂ ಆಯಾಗಳಿಗೆ ಸ್ವಾತಂತ್ರೋತ್ಸವದ ಸ್ವರ್ಣ ಜಯಂತಿ ಉತ್ಸವದ ಪ್ರಯುಕ್ತ ಹೆಚ್ಚಿನ ಸಂಬಳ, ಸವಲತ್ತು ಕೊಡಲು ಸರ್ಕಾರದವರು ಪರಿಶೀಲಿಸುವರೇ?

ಆ) 1995-96, 1996-97ರಲ್ಲಿ ಮಂಗಳೂರು ಕ್ಷೇತ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ನಡೆಸಿದ ಸೇವಾ ಕಾರ್ಯಕ್ರಮಗಳು ಯಾವುವು?

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ಸ್ವಾತಂತ್ರೋತ್ಸವದ ಸ್ವರ್ಣ ಜಯಂತಿಯ ವರ್ಷದಲ್ಲಿ ೇಂದ್ರ ಸರ್ಕಾರವು 16-5-1997 ರಿಂದ ಅನ್ವಯವಾಗುವಂತೆ ಕಾರ್ಯಕರ್ತೆಯರಿಗೆ ೇಕಡ 25ರಷ್ಟು, ಸಹಾಯಕೀಯವರಿಗೆ ೇಕಡ 30ರಷ್ಟು ಗೌರವಧನ ಹೆಚ್ಚಿಸಿರುತ್ತದೆ.